KACB200008422022

# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬಾಗೇಪಲ್ಲಿ.

ದಿನಾಂಕ 07 ನೇ ಮಾಹೆ ಜುಲೈ 2026

ಉಪಸ್ಥಿತರು

**ಶ್ರೀಮತಿ. ರಂಜಿತ ಎಸ್.,** ಎಂ.ಎಸ್.ಡಬ್ಲ್ಯೂ. ಎಲ್.ಎಲ್.ಬಿ.
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,
ಬಾಗೇಪಲ್ಲಿ.

## ಸಿ.ಸಿ ಸಂಖ್ಯೆಃ 95/2022

ಫಿರ್ಯಾದುದಾರರು : ಸರ್ಕಾರದ ಪರವಾಗಿ,
ಚೇಳೂರು ಆರಕ್ಷಕ ಠಾಣೆ
(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು)

- *ವಿರುದ್ಧ* -

ಆರೋಪಿರುಃ

1. ಗಂಗಾಧರ ಬಿನ್ ಲೇಟ್ ಮೆನೇಪ್ಪ
ವಯಸ್ಸು 35 ವರ್ಷಗಳು,

2. ಸೋಮು ಬಿನ್ ಈರಪ್ಪ
ವಯಸ್ಸು 31 ವರ್ಷಗಳು,

3. ರಾಣಿ
ವಯಸ್ಸು 30 ವರ್ಷಗಳು,

4. ಲಕ್ಷ್ಮಮ್ಮ ಕೋಂ ಈರಪ್ಪ
ವಯಸ್ಸು 50 ವರ್ಷಗಳು,

5. ಚಿಣ್ಣ ಗಂಗುಲಮ್ಮ
ಕೋಂ ಲೇಟ್ ಮುನಿಯಪ್ಪ
ವಯಸ್ಸು 50 ವರ್ಷಗಳು,
ಎಲ್ಲ ಆರೋಪಿಗಳ ವಾಸಃ
ಚಾಕವೇಲು  ಗ್ರಾಮ,
ಬಾಗೇಪಲ್ಲಿ ತಾಲ್ಲೂಕು,

ಚಿಕ್ಕಬಳ್ಳಾಪುರ ಜಿಲ್ಲೆ.

(ಪ್ರತಿನಿಧಿಸುವವರು **ಶ್ರೀ. ಎಸ್.ಎನ್.ಆರ್.**, ವಕೀಲರು)

| | | |
|---|---|---|
| ಅಪರಾಧ ನಡೆದ ದಿನಾಂಕ | : | 07.09.2021 |
| ಅಪರಾಧ ವರದಿಯಾದ ದಿನಾಂಕ | : | 08.09.2021 |
| ಫಿರ್ಯಾದುದಾರರ ಹೆಸರು | : | ಶ್ರೀನಿವಾಸ |
| ಸಾಕ್ಷ್ಯ ಪ್ರಾರಂಭಿಸಿದ ದಿನಾಂಕ | : | 01.07.2026 |
| ತಿರ್ಪೀನ ದಿನಾಂಕ | : | 07.07.2026 |
| ಆರೋಪಿಸಲಾದ ದಂಡನೀಯ ಅಪರಾಧ | : | ಭಾರತೀಯೀಯ ದಂಡ ಸಂಹಿತೆ, ಕಲಂ 143, 323, 324, 504, 506, 506 ಮತ್ತು ಸಹ ವಾಚಕ ಕಲಂ 149. |
| ನ್ಯಾಯಾಧೀಶರ ಅಭಿಪ್ರಾಯ | : | ಭಾರತೀಯೀಯ ದಂಡ ಸಂಹಿತೆ, ಕಲಂ 143, 323, 324, 504, 506, 506 ಮತ್ತು ಸಹ ವಾಚಕ ಕಲಂ 149 ರ ರೀತ್ಯಾ ದಂಡನೀಯ ಅಪರಾಧಗಳ ಆರೋಪಗಳಿಂದ ಆರೋಪಿತರನ್ನು ದೋಷ ಮುಕ್ತಗೊಳಿಸಿ ನಿರ್ದೋಷಿಗಳೆಂದು ನಿರ್ಣಯಿಸಿ ಅವರ ಬಿಡುಗಡೆಗೆ ಆದೇಶಿಸಲಾಗಿದೆ. |
| ಸರ್ಕಾರದ ಪರವಾಗಿ | : | ಸಹಾಯಕ ಸರ್ಕಾರಿ ಅಭಿಯೋಜಕರು, ಬಾಗೇಪಲ್ಲಿ |
| ಆರೋಪಿತರ ಪರವಾಗಿ | : | ಶ್ರೀ. ಎಸ್.ಎನ್.ಆರ್., ವಕೀಲರು |
| ತೀರ್ಪು ನೀಡಲು ತೆಗೆದುಕೊಂಡ ಒಟ್ಟು ಅವಧಿ | : | ವರ್ಷಗಳು ತಿಂಗಳು ದಿನಗಳು<br>04 10 00 |

**: ತೀರ್ಪು :**

ದಿನಾಂಕ 08-09-2021 ರಂದು ರಾತ್ರಿ 22.30 ಗಂಟೆಗೆ ಫಿರ್ಯಾದದಾರರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದು ಆರೋಪಿತರ ವಿರುದ್ದ ಠಾಣಾ ಮೊ.ಸಂಖ್ಯೆ 86/2021 ರಂತೆ ಭಾರತೀಯೀಯ ದಂಡ ಸಂಹಿತೆ ಕಲಂ 143, 323, 324, 504, 506, ಮತ್ತು ಸಹ ವಾಚಕ ಕಲಂ 149 ಅಡಿಯಲ್ಲಿನ ಆರೋಪಗಳಿಗೆ ಪ್ರಕರಣವನ್ನು ನೊಂದಾಯಿಸಿಕೊಳ್ಳಲಾಗಿರುತ್ತದೆ.

**2. ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ಏನೆಂದರೆಃ**

ದಿನಾಂಕ 07-09-2021 ರಂದು ಬೆಳಿಗ್ಗೆ 10.00 ಗಂಟೆಯ ಸಮಯದಲ್ಲಿ ಚೇಳೂರು ಪೋಲಿಸ್ ಠಾಣಾ ಸರಹದ್ದಿಗೆ ಚಾಸಾ-1 ರವರು ಅಂಗಡಿಗೆ ಹೋಗಲು ರಾಜು ರವರ ಮನೆಯ ಮುಂದಿನ ರಸ್ತೆಯಲ್ಲಿ ಹೋಗುತ್ತಿದಾಗ 1ನೇ ಆರೋಪಿಯು ನಿಂತು ಕೊಂಡಿದ್ದಾಗ ಚಾಸಾ-1 ರವರು 1ನೇ ಆರೋಪಿಯು ರವರಿಗೆ ಚೀಟಿ ಹಣ ಕೋಡುವಂತೆ ಕೇಳಿದಾಗ ಮಾತಿಗೆ ಮಾತು ಬೆಳೆದು 1ನೇ ಆರೋಪಿಯು ಲೋಪರ್ ನನ್ನ ಮಗನೇ ಎಂದು ಅವಾಚ್ಯವಾಗಿ ಬೈದು ನಿನಗೆ ಯಾವುದೇ ಹಣ ಕೊಡಬೇಕಾಗಿಲ್ಲ ನನ್ನ ಮಗನೆ ನಿನಗೆ ಇ ಸಾಯಿಸಿಬಿಡುತ್ತೇನೆಂದು ಪ್ರಾಣ ಬೆದಿರಿಕೆ ಹಾಕಿರುವುದಾಗಿ ಹಾಗೂ ಅಲ್ಲಿಯೇ ಇದ್ದ ಕಬ್ಬಿಣದ ರಾಡುನಿಂದ ಚಾಸಾ-1 ರವರ ಎಡಭಾಗದ ಕಿವಿ ಮೇಲ್ಭಾಗದ ತಲೆಯ ಮೇಲೆ ಹೊಡೆದು ರಕ್ತ ಗಾಯ ಪಡಿಸಿರುವುದಾಗಿ, 2ನೇ ಆರೋಪಿ ರವರು ದೊಣ್ಣೆಯಿಂದ ಚಾಸಾ-1 ರವರ ಬಲಕಾಲಿನ ಮೇಲೆ ಹೊಡೆದು ತರುಚಿದ ಗಾಯವನ್ನು ಉಂಟುಮಾಡಿರುವುದಾಗಿ, 3ನೇ ಆರೋಪಿಯು ಕಲ್ಲಿನಿಂದ ಚಾಸಾ-1 ರವರ ತಲೆಯ ಮೇಲೆ ಹೊಡೆದು ರಕ್ತಗಾಯಪಡಿಸಿರುವುದಾಗಿ, 4ನೇ ಆರೋಪಿಯು ಚಾಸಾ-1 ರವರ ಗಲಾ ಪಟ್ಟಿಯನ್ನು ಹಿಡಿದು ಎಳೆದಾಡಿರುವುದಾಗಿ, 5ನೇ ಆರೋಪಿಯು ಚಾಸಾ-1 ರವರನ್ನು ಬೇವರ್ಸಿ ನನ್ನ ಮಗನೇ ಎಂಬುದಾಗಿ ಅವಾಚ್ಯವಾಗಿ ಬೈದಿದ್ದು ಆ ಮೂಲಕ ಭಾರತೀಯೀಯ ದಂಡ ಸಂಹಿತೆ ಕಲಂ 143, 323, 324, 504, 506, ಮತ್ತು ಸಹ ವಾಚಕ ಕಲಂ 149 ರಡಿಯಲ್ಲಿ ಈ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ.

**3.** ಈ ನ್ಯಾಯಾಲಯವು ಘಟನೆ ನಡೆಯಿತೆನ್ನಲಾದ ಅಪರಾಧಗಳ ಬಗ್ಗೆ ಸಂಜ್ಞೆಯನ್ನು ತೆಗೆದು ಕೊಂಡು, 1 ರಿಂದ 5ನೇ ಆರೋಪಿತರಿಗೆ ನ್ಯಾಯಾಲಯದ ಹಾಜರಾತಿಗಾಗಿ ಸಮನ್ಸನ್ನು ಹೊರಡಿಸಿರುತ್ತದೆ. ಆರೋಪಿತರು

ದಿನಾಂಕ 22.09.2021 ರಂದು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನನ್ನು ಪಡೆದು ಕೊಂಡಿರುತ್ತಾರೆ. ಆರೋಪಿತರಿಗೆ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ.207ರ ರೀತಿ ಅಗತ್ಯಪಡಿಸಿರುವಂತೆ ದೋಷಾರೋಪಣೆ ಪಟ್ಟಿ ಹಾಗೂ ಯುಕ್ತ ದಾಖಲೆಗಳ ನಕಲುಗಳನ್ನು ಒದಗಿಸಲಾಗಿದೆ. ಭಾರತೀಯೀಯ ದಂಡ ಸಂಹಿತೆಯ ಕಲಂ 143, 504, 506, 324, 323 ಮತ್ತು ಸಹ ವಾಚಕ ಕಲಂ 149 ರ ಆರೋಪಗಳಿಗಾಗಿ ಆರೋಪಿತರ ವಿರುದ್ಧದ ದೋಷಾರೋಪಣೆಯನ್ನು ತಯಾರಿಸಿ, ಓದಿ, ವಿವರಿಸಲಾಗಿ ಆರೋಪಿತರು ತನ್ನ ವಿರುದ್ಧದ ಆರೋಪಗಳನ್ನು ಅಲ್ಲಗಳೆದದ್ದು, ಸದರಿ ಆರೋಪಗಳು ವಿಚಾರಣೆಯಾಗಲೆಂದು ಕೇಳಿಕೊಂಡ ಮೇರೆಗೆ ಅಧಿವಿಚಾರಣೆ ಮಾಡಲಾಯಿತು.

**4.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಬೆಂಬಲಸಿ ಫಿರ್ಯಾದಿದಾರರು ಮತ್ತು ಗಾಯಾಳು ಸಾಕ್ಷಿ ಚಾ.ಸಾ.1 ಮತ್ತು ಪ್ರತ್ಯಕ್ಷ ಸಾಕ್ಷಿದಾರರಾದ ಚಾ.ಸಾ.2 ರವರನ್ನಾಗಿ ವಿಚಾರಣೆಗೆ ಒಳಪಡಿಸಿಕೊಂಡು ನಿಪಿ.1 ರಿಂದ ನಿಪಿ.3 ದಾಖಲೆಗಳನ್ನು ಗುರ್ತಿಸಿ ಕೊಂಡಿರುತ್ತಾರೆ. ವಿಚಾರಣೆ ಮಾಡಲಾದ ಪ್ರಮುಖ ಸಾಕ್ಷಿಯಾದ ಅ.ಸಾ.1 ಮತ್ತು ಅ.ಸಾ.2 ರವರು ಅಭಿಯೋಜನೆಯನ್ನು ಬೆಂಬಲಿಸದಿದ್ದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಪರಿಗಣಿಸಿ, ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಿ ಎನ್ನುವ ಅಭಿಯೋಜನೆಯವರ ಕೋರಿಕೆಯನ್ನು ತಿರಸ್ಕರಿಸಲಾಗಿರುತ್ತದೆ. ವಿಚಾರಣೆ ಮಾಡಲಾದ ಸಾಕ್ಷಿದಾರರ ಹೇಳಿಕೆಯಲ್ಲಿ ಆರೋಪಿತರ ಹಿತಾಸಕ್ತಿಗೆ ವಿರುದ್ಧವಾದ ಅಂಶಗಳು ಇರದಿದ್ದ ಕಾರಣ ಅವರನ್ನು ಅಪರಾಧಿಕ ಸಂಹಿತೆ ಕಲಂ. 313 ರಡಿಯಲ್ಲಿ ಪ್ರಶ್ನಿಸಿ ಹೇಳಿಕೆಯನ್ನು ದಾಖಲಿಸುವ ಹಂತವನ್ನು ಕೈಬಿಡಲಾಗಿದೆ.

**5.** ಉಭಯತ್ರರ ವಾದವನ್ನು ಆಲಿಸಿ ಕಡತವನ್ನು ನೋಡಲಾಗಿ ಈ ಕೆಳಕಂಡ ಅಂಶಗಳು ನ್ಯಾಯಾಲಯದ ನಿರ್ಣಯಕ್ಕೆ ಬಂದಿರುತ್ತವೆ.

## ಅಂಶಗಳು

**ಅಂಶ-1 :** ದಿನಾಂಕ 07.09.2021 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಬಾಗೇಪಲ್ಲಿ ತಾಲ್ಲೂಕು ಬಾಗೇಪಲ್ಲಿ ಚೇಳೂರು ಪೊಲೀಸ್ ಠಾಣಾ ಸರಹದ್ದು ಚಾಸಾ-1 ಶ್ರೀನಿವಾಸ ರವರು ಅಂಗಡಿಗೆ ಹೋಗಲು ರಾಜು ರವರ ಮನೆಯ ಮುಂದಿನ ರಸ್ತೆಯಲ್ಲಿ ಹೋಗುತ್ತಿರುವಾಗ ಆರೋಪಿಗಳು ಏಕೋದ್ದೇಶದಿಂದ ಸೇರಿ ಅಕ್ರಮ ಗುಂಪು ಕಟ್ಟಿಕೊಂಡು ವಿಧಿವಿರುದ್ಧದ ಕೂಟದ ಸದಸ್ಯರಾಗಿದ್ದು ಆ ಪ್ರಕಾರ ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ-2:** ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳು ಏಕೋದ್ದೇಶದಿಂದ ಬಂದು ಆ ಪೈಕಿ 1 ಮತ್ತು 5 ನೇ ಆರೋಪಿಗಳು ಚಾಸಾ-1 ರವರಿಗೆ ಲೋಪರ್ ನನ್ನ ಮಗನೇ ಮತ್ತು ಬೇವರ್ಸಿ ನನ್ನ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿಗೆ ಭಂಗ ಉಂಟುಮಾಡಿರುತ್ತೀರಿ, ಆ ಪ್ರಕಾರ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ-3:** ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯಲ್ಲಿ ಆರೋಪಿಗಳು ಏಕೋದ್ದೇಶದಿಂದ ಬಂದು ಆ ಪೈಕಿ 1 ನೇ ಆರೋಪಿಯು ಚಾಸಾ-1 ರವರಿಗೆ ನಿನಗೆ ಯಾವುದೇ ಹಣ ಕೊಡಬೇಕಾಗಿಲ್ಲ ನನ್ನ ಮಗನೇ ನಿನ್ನ ಇಲ್ಲೇ ಸಾಯಿಸಿಬಿಡುತ್ತೇನೆಂದು ಪ್ರಾಣ ಬೆದರಿಕೆಯನ್ನು

ಹಾಕಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ-4:** ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯಲ್ಲಿ ಆರೋಪಿಗಳು ಏಕೋದ್ದೇಶದಿಂದ ಬಂದು ಆ ಪೈಕಿ 1 ನೇ ಆರೋಪಿಯು ಅಲ್ಲಿಯೇ ಇದ್ದ ಕಬ್ಬಿಣದ ರಾಡ್ ನಿಂದ ಚಾಸಾ-1 ರವರ ಎಡಭಾಗದ ಕಿವಿ ಮೇಲ್ಭಾಗದ ತಲೆಯ ಮೇಲೆ ಹೊಡೆದಿದ್ದು, 2 ನೇ ಆರೋಪಿಯು ದೊಣ್ಣೆಯಿಂದ ಚಾಸಾ-1 ರವರ ಬಲಕಾಲಿನ ಮೇಲೆ ಹೊಡೆದಿದ್ದು, 3 ನೇ ಆರೋಪಿಯು ಕಲ್ಲಿನಿಂದ ಚಾಸಾ-1 ರವರ ತಲೆಯ ಮೇಲೆ ಹೊಡೆದು ರಕ್ತಗಾಯ ಪಡಿಸಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ-5:** ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯಲ್ಲಿ ಆರೋಪಿಗಳು ಏಕೋದ್ದೇಶದಿಂದ ಬಂದು ಆ ಪೈಕಿ 4 ನೇ ಆರೋಪಿಯು ಕೈ ಗಳಿಂದ ಚಾಸಾ-1 ರವರ ಗಲ್ಲಾಪಟ್ಟಿಯನ್ನು ಹಿಡಿದು ಎಳೆದಾಡಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ-6:** ಹಾಗಿದ್ದರೆ ಏನು ಆದೇಶ ?

**6.** ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ನಿರ್ಣಯಗಳು ಈ ಕೆಳಗಿನಂತೆ ಇದೆಃ

| | | |
|---|---|---|
| ಅಂಶ 1 | - | ನಕಾರಾತ್ಮಕವಾಗಿ |
| ಅಂಶ 2 | - | ನಕಾರಾತ್ಮಕವಾಗಿ |
| ಅಂಶ 3 | - | ನಕಾರಾತ್ಮಕವಾಗಿ |
| ಅಂಶ 4 | - | ನಕಾರಾತ್ಮಕವಾಗಿ |
| ಅಂಶ 5 | - | ನಕಾರಾತ್ಮಕವಾಗಿ |
| ಅಂಶ 6 | - | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ |

## : ಕಾರಣಗಳು :

**7.** **ಅಂಶ ಸಂಖ್ಯೆ 1 ರಿಂದ 5** ಅಭಿಯೋಜನೆಯ ಸಂಕ್ಷಿಪ್ತ ಪ್ರಕರಣದ ಸಾರಾಂಶವನ್ನು ಈಗಾಗಲೇ ಖಂಡಿಕೆ-2 ರಲ್ಲಿ ಹೇಳಲಾಗಿದ್ದು, ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿದಾರರಾದ ಅ.ಸಾ.1 ರವರು ಪ್ರಥಮ ವರ್ತಮಾನ ಹೇಳಿಕೆ ನೀಡಿದ ಸಾಕ್ಷಿದಾರರು ಹಾಗೂ ಗಾಯಾಳುಗಳಾಗಿದ್ದು ಅ.ಸಾ.2 ರವರು ಪ್ರತ್ಯಕ್ಷ್ಯ ಸಾಕ್ಷಿದಾರರಾಗಿರುತ್ತಾರೆ. ಅಭಿಯೋಜನೆಯು ತಮ್ಮ ಪ್ರಕರಣವನ್ನು ಸಾಬೀತುಪಡಿಸುವಲ್ಲಿ ಈ ಮೇಲ್ಕಂಡ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿದ್ದಾರೆ.

**8.** ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿದಾರರಲ್ಲಿ ಫಿರ್ಯಾದಿ ಸಾಕ್ಷಿ ಅ.ಸಾ.1 ಶ್ರೀನಿವಾಸ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದೇನೆಂದರೆ, ನ್ಯಾಯಾಲಯದ ಮುಂದಿರುವ ಆರೋಪಿತರು ತನಗೆ ಯಾವುದೇ ರೀತಿ ಅಕ್ರಮ ಗುಂಪು ಕಟ್ಟಿಕೊಂಡು ಬಂದು ತನಗೆ ಹಲ್ಲೆ ಮಾಡಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ. ಹಿಂದೆ ಪೋಲೀಸರು ತನ್ನಿಂದ ಕೆಲವೊಂದು ದಾಖಲೆಗಳಿಗೆ ಸಹಿಹಯನ್ನು ಪಡೆದು ಕೊಂಡಿರುತ್ತಾರೆ. ಸಾಕ್ಷಿದಾರರು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ.1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.1(ಎ)

ಎಂದು ಗುರುತಿಸಿಕೊಳ್ಳಲಾಗಿರುತ್ತದೆ. ನಿಪಿ.1ರಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿಲ್ಲವೆಂದು ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ.

**9.** ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿದಾರರಲ್ಲಿ ಗಾಯಾಳು ಸಾಕ್ಷಿ ಅ.ಸಾ-2 ರವಣಪ್ಪ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದೇನೆಂದರೆ, 1 ಮತ್ತು 5ನೇ ಆರೋಪಿಗಳು ಗೊತ್ತು. ನಾನು ಯಾವುದೇ ಘಟನೆಯನ್ನು ನೋಡಿರುವುದಿಲ್ಲ ಮತ್ತು ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲವೆಂದು ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ.

**10.** ಈ ಮೇಲೆ ಹೇಳಿದ ಮೌಖಿಕ ಸಾಕ್ಷ್ಯಕ್ಕೆ ಬೆಂಬಲವಾಗಿ, ಅಭಿಯೋಜನೆಯವರು ಅಸಾ.1 ರವರು ನೀಡಿದ ದೂರನ್ನು ನಿಪಿ.1 ಎಂದು, ಹಾಗೂ ಅಸಾ.1 ರವರು ನೀಡಿದ ಹೇಳಿಕೆಯನ್ನು ನಿಪಿ.2 ಎಂದು ಮತ್ತು ಅಸಾ.2 ರವರು ನೀಡಿದ ಹೇಳಿಕೆಯನ್ನು ನಿಪಿ.3 ಎಂದು ಗುರ್ತಿಸಿಕೊಂಡಿರುತ್ತಾರೆ.

**11.** ಅಭಿಯೋಜನೆಯು ಪ್ರಾ.ಸಾ.1 ಮತ್ತು 2 ರವರನ್ನು ಪಾಟೀ ಸವಾಲುಗೊಳಿಸಿದರೂ ಸದರಿ ಸಾಕ್ಷಿದಾರರಿಂದ ಅಭಿಯೋಜನೆಯನ್ನು ಬೆಂಬಲಿಸುವಂತಹ ಯಾವುದೇ ಸಾಕ್ಷ್ಯ ಹೇಳಿಕೆಗಳನ್ನು ಹೊರತೆಗೆಯಲಾಗಲಿಲ್ಲ. ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಪ್ರಮುಖ ಸಾಕ್ಷಿದಾರರು ಅಭಿಯೋಜನೆಯನ್ನು ಬೆಂಬಲಿಸದಿದ್ದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಪರಿಗಣಿಸಲಾಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಪಟ್ಟಂತೆ ನ್ಯಾಯಾಲಯದಲ್ಲಿ ಹಾಜರುಪಡಿಸಲಾದ ಸಾಕ್ಷ್ಯದ ಅವಲೋಕನ ಮಾಡಿ ನೋಡಿದಾಗ ಅಭಿಯೋಜನೆ ಪ್ರಕರಣದ ಬಗ್ಗೆ ಬೆಳಕು ಚೆಲ್ಲಬಹುದಾಗಿದ್ದ ಪ್ರಾ.ಸಾ.1 ಮತ್ತು 2 ರವರು ಅಭಿಯೋಜನೆಯನ್ನು

ಬೆಂಬಲಿಸದೇ ಪ್ರತಿಕೂಲ ಹೊಂದಿದ್ದು, ಅಭಿಯೋಜನೆಗೆ ಆಘಾತಕಾರಿ ಆಗಿರುತ್ತದೆ. ಆದುದರಿಂದ ಅಭಿಯೋಜನೆಯವರು ಹೇಳುವಂತಹ ಘಟನೆ ನಡೆದಿರುವ ಸಾಧ್ಯತೆ ಇದೆ ಎಂದು ತೋರಿಸಲು ಅಭಿಯೋಜನೆ ವಿಪಲ್ಲಿವಾಗಿದೆ. ಆದ್ದರಿಂದ 1 ರಿಂದ 5 ನೇ ಆರೋಪಿತರ ವಿರುದ್ಧ ಹೊರಿಸಲಾದ ಆರೋಪಗಳನ್ನು ಸಂಶಯಾತೀತವಾಗಿ ಸಾಭೀತುಪಡಿಸುವಲ್ಲಿ ಅಭಿಯೋಜನೆಯವರು ಸಂಪೂರ್ಣವಾಗಿ ವಿಫಲರಾಗಿರುತ್ತಾರೆಂದು ನಿರ್ಣಯಿಸಿ, ನ್ಯಾಯಾಲಯದ ನಿರ್ಣಯಕ್ಕೆ ಬಂದ ಅಂಶ 1 ರಿಂದ 5 ನ್ನು **ನಕಾರಾತ್ಮಕವಾಗಿ** ಉತ್ತರಿಸಿದೆ.

**12.** **ಅಂಶ ಸಂಖ್ಯೆ-6:** ಮೇಲ್ಕಂಡ ಚರ್ಚೆಯಲ್ಲಿ ಅಂಶ-1 ರಿಂದ 5 ನ್ನು ನಕಾರಾತ್ಮಕವಾಗಿ ಉತ್ತಸಿರುವುದರಿಂದ 1 ರಿಂದ 5ನೇ ಆರೋಪಿತರು ಸಂಶಯದ ಲಾಭ ಹೊಂದಿ ಬಿಡುಗಡೆಗೆ ಅರ್ಹರಾಗಿದ್ದು, ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

## ಆದೇಶ

ಅಪರಾಧಿಕ ಪ್ರಕ್ರಿಯಾ ಸಂಹಿತೆ 248(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಪ್ರಕರಣದ 1 ರಿಂದ 5ನೇ ಆರೋಪಿತರ ವಿರುದ್ಧ ಹೊರಿಸಲಾದ ಭಾರತೀಯೀಯ ದಂಡ ಸಂಹಿತೆಯ ಕಲಂ. 143, 504, 506, 324, 323 ಮತ್ತು ಸಹ ವಾಚಕ ಕಲಂ 149 ರಡಿಯಲ್ಲಿನ ಆರೋಪಗಳಿಂದ 1 ರಿಂದ 5ನೇ ಆರೋಪಿತರನ್ನು ನಿರ್ದೋಷಿಗಳು ಎಂದು ತೀರ್ಮಾನಿಸಿ ಬಿಡುಗಡೆಗೊಳಿಸಲಾಗಿದೆ.

ಆರೋಪಿಗಳು ಮತ್ತು ಅವರ ಜಾಮೀನುದಾರರು ಬರೆದು ಕೊಟ್ಟಿರುವ ಜಾಮೀನಿನ ಮುಚ್ಚಳಿಕೆಗಳು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರಡಿಯಲ್ಲಿ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ಮಾಲುಪಟ್ಟಿ ಸಂಖ್ಯೆ:- 73/2021 ದಿನಾಂಕ 09.09.2021 ರಲ್ಲಿ ನಮೂದಿಸಿರುವ ಸುಮಾರು 2 ½ ಅಡಿ ಉದ್ದದ ತುಕ್ಕು ಹಿಡಿದಿರುವ ಕಬ್ಬಿಣದ ರಾಡ್, ಸುಮಾರು 3 ಅಡಿ ಉದ್ದದ ಕಾಡು ಜಾತಿಯ ಒಂದು ದೊಣ್ಣೆ ಮತ್ತು ಹಿಡಿ ಗಾತ್ರದ ಒಂದು ಕಲ್ಲು ಇವುಗಳು ಯಾವುದೇ ಬೆಲೆ ಬಾಳದ ವಸ್ತುವಾಗಿದ್ದರಿಂದ ಅವುಗಳನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸತಕ್ಕದ್ದು.

(ಶೀಘ್ರಲಿಪಿಗಾರಿಗೆ ಗಣಕಯಂತ್ರದಲ್ಲಿ ನೇರವಾಗಿ ಉಕ್ತಲೇಖನ ಕೊಟ್ಟಿದ್ದು, ಅವರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕ 07ನೇ ಜುಲೈ 2026 ರಂದು ತೆರೆದು ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ.)

ಸಹಿ/-
**( ಶ್ರೀಮತಿ. ರಂಜಿತ. ಎಸ್)**
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ,
ಬಾಗೇಪಲ್ಲಿ.

**: ಅನುಬಂಧ :**

**1) ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ :**

| | | |
|---|---|---|
| ಪ್ರಾಸಾ.1 | : | ಶ್ರೀನಿವಾಸ |
| ಪ್ರಾಸಾ.2 | : | ರವಣಪ್ಪ |

**2) ಅಭಿಯೋಜನೆ ಪರ ಗುತಿರ್ಸಿದ ದಾಖಲಾತಿಗಳು :**

| | | |
|---|---|---|
| ನಿಪಿ-1 | : | ದೂರು |
| ನಿಪಿ-1(ಎ) | : | ಸಹಿ |
| ನಿಪಿ-2 | : | ಪ್ರಾಸಾ.1 ರವರ ಹೇಳಿಕೆ |
| ನಿಪಿ-3 | : | ಪ್ರಾಸಾ.2 ರವರ ಹೇಳಿಕೆ |

**3) ಆರೋಪಿತರ ಪರ ಯಾವುದೇ ಸಾಕ್ಷಿ ಮತ್ತು ದಾಖಲೆಗಳು**

ಇರುವುದಿಲ್ಲ.

**4) ಮುದ್ದೆ ಮಾಲುಗಳು :**

ಮುದ್ದೆಮಾಲುಗಳು: ಸುಮಾರು 2 ½ ಅಡಿ ಉದ್ದದ ತುಕ್ಕು ಹಿಡಿದಿರುವ ಕಬ್ಬಿಣದ ರಾಡ್, ಸುಮಾರು 3 ಅಡಿ ಉದ್ದದ ಕಾಡು ಜಾತಿಯ ಒಂದು ದೊಣ್ಣೆ ಮತ್ತು ಹಿಡಿ ಗಾತ್ರದ ಒಂದು ಕಲ್ಲು

ಸಹಿ/-
**( ಶ್ರೀಮತಿ. ರಂಜಿತ. ಎಸ್)**
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ,
ಬಾಗೇಪಲ್ಲಿ.